## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ

## ಸಿ.ಸಿ.3193/2022

| | | | | |
|---|---|---|---|---|
| 01 | ಹೆಸರು | ಕುಸುಮಲತಾ ಪೈ | ಸಿ ಡಬ್ಲೂ | **1** |
| 02 | ಗಂಡನ ಹೆಸರು | ಮೋಹನ್ ಪೈ | ಪಿಡಬ್ಲೂ | 1 |
| 03 | ವಯಸ್ಸು | 66 | ಪ್ರಮಾಣೀಕರಿಸಲಾದ ದಿನಾಂಕಃ | |
| 04 | ಉದ್ಯೋಗ | ಕೆ ಎಸ್ ಎ ಎನ್ ಜಿ ಒ | 17.12.2025 | |
| 05 | ಊರು | ಬೆಂಗಳೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾ ಸಾ 2 ರಿಂದ 9 ರವರ ಪರಿಚಯ ಇರುತ್ತದೆ. ನನಗೆ ಆರೋಪಿಯ ಪರಿಚಯ ಇರುತ್ತದೆ. ಈಗ ನೋಡುತ್ತಿರುವ ದಾಖಲೆಯಲ್ಲಿ ಇರುವ ಸಹಿ ನನ್ನದೆ. ಸದರಿ ದಾಖಲೆಯು ಬೆಂಗಳೂರಿನ ಆರ್ ಟಿ ನಗರದ ಪೊಲೀಸ್ ಠಾಣೆಯಲ್ಲಿ ನೀಡಿದ ದೂರಿನ ನಕಲು ಪ್ರತಿಯಾಗಿದ್ದು, ಅದನ್ನು ನಿ ಪಿ 1 ಎಂದು ಗುರುತಿಸಲಾಯಿತು. ನಾನು ನಿ ಪಿ 1ರಂತೆ ಯಾವುದೇ ದೂರು ನೀಡಿರುವುದಿಲ್ಲ ಮತ್ತು ನನಗೆ ನಿ ಪಿ 1ರಲ್ಲಿ ಬರೆದಿರುವ ಸಂಗತಿಗಳು ಗೊತ್ತಿಲ್ಲ. ಆರೋಪಿಯು ನಮ್ಮ ಸಂಸ್ಥೆಗೆ ಯಾವುದೇ ವಂಚನೆ ಮತ್ತು ನಂಬಿಕೆ ದ್ರೋಹ ಮಾಡಿರುವುದಿಲ್ಲ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿರುವ ಸಹಿ ನನ್ನದೆ. ಸದರಿ ದಾಖಲೆಯು ಸ್ಥಳ ಮಹಜರ್ ಆಗಿದ್ದು ಅದನ್ನು ನಿ ಪಿ 2 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ನನಗೆ ನಿ ಪಿ 2 ರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ನಿ ಪಿ 2 ರಂತೆ ಯಾವುದೆ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಮತ್ತು ಯಾವುದೇ ದಾಖಲೆಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಅದೇ ರೀತಿ ಈಗ ನೋಡುತ್ತಿರುವ ಹಾಜರಾತಿ ಪುಸ್ತಕದಪ್ರತಿಗಳಲ್ಲಿರುವ ಸಹಿ ನನ್ನದೆ. ಸದರಿ ದಾಖಲೆಗಳನ್ನು ನಿ ಪಿ 3 ರಿಂದ 7 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ ಪಿ 3(ಎ) ದಿಂದ 7(ಎ) ಎಂದು ಗುರುತಿಸಲಾಯಿತು.

ಅದೇ ರೀತಿ ಈಗ ನೋಡುತ್ತಿರುವ ದಾಖಲೆಗಳಲ್ಲಿರುವ ಸಹಿ ನನ್ನದೆ. ಸದರಿ ದಾಖಲೆಗಳು ಆರೋಪಿ ಸಲ್ಲಿಸಿರುವ ಸಿ.ವಿ. ಇದ್ದು ಅವುಗಳನ್ನು ನಿ ಪಿ 8 ಮತ್ತು 9 ಎಂದು ಹಾಗೂ ಸಾಕ್ಷಿಯ ಸಹಿಗಳನ್ನು ನಿ ಪಿ 8(ಎ) ಮತ್ತು ನಿ ಪಿ 9(ಎ) ಎಂದು ಗುರುತಿಸಲಾಯಿತು. ಸದರಿ ನಿ ಪಿ 3 ರಿಂದ 9ರ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಎ ಪಿ ಪಿ ರವರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ನಾನು ತಿ.ನರಸೀಪುರ ತಾಲ್ಲೂಕು ತುರಗನೂರು ಗ್ರಾಮದಲ್ಲಿ ನಾನು ನಡೆಸುತ್ತಿರುವ ಕೆ ಎಸ್ ಎ, ಸೋಷಿಯಲ್ ಆಕ್ಷನ್, ಎನ್ ಜಿ ಒ ದಲ್ಲಿ ಆರೋಪಿಯನ್ನು ವ್ಯವಸ್ಥಾಪಕರಾಗಿ ನೇಮಕ ಮಾಡಿದ್ದು, ಸದರಿ ಆರೋಪಿಯು ತನ್ನ ಹುದ್ದೆಯನ್ನು ದುರುಪಯೋಗಪಡಿಸಿಕೊಂಡು 2018 ನೇ ಸಾಲಿನ ಮೇ ತಿಂಗಳಿನಿಂದ ಸೆಪ್ಟೆಂಬರ್ ವರೆಗೂ ಅವರ ತಾಯಿಯಾದ ಸುನಂದಾ ಮತ್ತು ಸಹೋದರಿಯಾದ ಸುಷ್ಮಾ ಅವರ ಹೆಸರನ್ನು ಹಾಜರಾತಿ ಪುಸ್ತಕದಲ್ಲಿ ಸೇರಿಸಿ ಅವರಿಗೆ ಒಟ್ಟು ರೂ.20,800/-ಹಣವನ್ನು ಕಾನೂನುಬಾಹಿರವಾಗಿ ನೀಡಿ ನಮ್ಮ ಸಂಸ್ಥೆಗೆ ನಂಬಿಕೆದ್ರೋಹ ಮತ್ತು ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ನಾನು ಬೆಂಗಳೂರಿನ ಪೊಲೀಸರಿಗೆ ನಿ ಪಿ 1 ರಂತೆ ದೂರು ಕೊಟ್ಟಿದ್ದು, ನಂತರ ಸದರಿ ದೂರು ಬನ್ನೂರು ಪೊಲೀಸರಿಗೆ ವರ್ಗಾವಣೆಗೊಂಡಿದ್ದು ಅದರಂತೆ ಬನ್ನೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡು ದಿಃ26.05.2022 ರಂದು ಬೆಳಗ್ಗೆ 11.00 ಗಂಟೆಯಿಂದ 11.30 ಗಂಟೆಯವರೆಗೂ ಚಾ ಸಾ 8 ರವರ ಸಮಕ್ಷಮ ಪಂಚನಾಮೆ ಜರುಗಿಸಿ ನಿ ಪಿ 3 ರಿಂದ 9 ರ ದಾಖಲೆಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ನಿ ಪಿ 1 ರಂತೆ ಆರೋಪಿಯ ವಿರುದ್ಧ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಘಟನಾ ಸ್ಥಳಕ್ಕೆ ಬಂದು ನಿ ಪಿ 2 ರಂತೆ ಪಂಚನಾಮೆ ಜರುಗಿ ನಿ ಪಿ 3 ರಿಂದ 9 ಅನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಮತ್ತು ಆರೋಪಿ ಈಗ ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಾನು ನಿ ಪಿ 1 ರಂತೆ ಆರೋಪಿಯ ವಿರುದ್ಧ ಪೊಲೀಸರಿಗೆ ದೂರು ಕೊಟ್ಟಿದ್ದರೂ ಸಹ ಮತ್ತು ಪೊಲೀಸರು ನನ್ನ ಸಮಕ್ಷಮ ನಿ ಪಿ 2 ರಂತೆ ಪಂಚನಾಮೆ ಜರುಗಿಸಿದ್ದರೂ ಸಹ ಮತ್ತು ನಾನೇ ನಿ ಪಿ 3 ರಿಂದ 9 ರ

ದಾಖಲೆಗಳನ್ನು ಪೊಲೀಸರಿಗೆ ನೀಡಿದ್ದರೂ ಸಹ ನಾನು ಮತ್ತು ಆರೋಪಿ ಈಗ ರಾಜಿ ಮಾಡಿಕೊಂಡ ಕಾರಣ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ ಎಂದು ನುಡಿದಿರುತ್ತಾರೆ.**

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.